# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ 18, ರಾಧಾಕೃಷ್ಣ ದೇವಸ್ಥಾನ, ಬೆಂಗಳೂರು-24

ಸಂಖ್ಯೆ: ಸ.ಅ/ವಾ-18/ಪಿ.ಆರ್/ 05/2021-22 ದಿನಾಂಕ:07-02-2022

## ::ವಾರ್ಡ್ ಸಮಿತಿ ಸಭೆಯ ನಡವಳಿಗಳು::

ವಿಷಯ: ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/ 2020-21 ದಿನಾಂಕ: 21-09-2020. ರವರ ಆದೇಶದಂತೆ ದಿನಾಂಕ: 05-02-2022 ರಂದು ವಾರ್ಡ್ ನಂ:18 ರಾಧಾಕೃಷ್ಣ ದೇವಸ್ಥಾನ ವಾರ್ಡ್‌ನ, ವಾರ್ಡ್ ಸಮಿತಿ ಸಭೆಯ ನಡವಳಿಗಳು.

## :: ಸಭೆಗೆ ಹಾಜರಾಗಿದ್ದವರ ವಿವರಗಳು ::

| ಕ್ರ.ಸಂ | ಹೆಸರು ಶ್ರೀಮತಿ/ಶ್ರೀ | ಪದನಾಮ |
|---|---|---|
| 1. | ಶ್ರೀ.ಎಂ.ವೆಂಕಟಾಚಲಪತಿ (ಜಂಟಿ ಆಯುಕ್ತರು ಕಂದಾಯ) | ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2. | ಶ್ರೀ.ಈ ಈರಣ್ಣ | ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾಡ್ ನಂ. 18 |
| 3. | ಶ್ರೀಮತಿ ಮಮತ | ಹಿರಯ ಆರೋಗ್ಯ ಪರಿವೀಕ್ಷಕರು, ವಾಡ್ ನಂ. 18 |
| 4. | ಶ್ರೀ. ಅಕ್ಷಯ್ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾಡ್ ನಂ. 18 |
| 5. | ಶ್ರೀ ನಾಗರಾಜ್ | ಕಂದಾಯ ವಸೂಲಿಗಾರರು |
| 6. | ಶ್ರೀ. ರಾಜೇಶ | ಸ್ಥಳೀಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು |
| 7. | ಶ್ರೀ. ಸುಬ್ಬರಾವ್ | ಸ್ಥಳೀಯ ನಿವಾಸಿಗಳು |
| 8. | ಶ್ರೀ. ಕುಮಾರ್ | ಆರ್.ಎಂ.ವಿ ಕ್ಲಬ್ ವತಿಯಿಂದ ಭಾಗವಹಿಸಿದವರು |
| 9. | ಶ್ರೀ. ಕೇಶವ್ ಪಟೇಲ್ | ಸ್ಥಳೀಯ ನಿವಾಸಿಗಳು |

ವಾರ್ಡ್ ಸಮಿತಿಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ, ಶ್ರೀ. ಎಂ. ವೆಂಕಟಾಚಲಪತಿ ಮತ್ತು ವಾರ್ಡ್ ಕಾರ್ಯದರ್ಶಿಗಳಾದ ಶ್ರೀ. ಈರಣ್ಣ ರವರು ಸಭೆಗೆ ಹಾಜರಾಗಿದ್ದ ಎಲ್ಲರಿಗೂ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡ ವಿಷಯಗಳ ಬಗ್ಗೆ ತಿಳಿಸಿದರು.

1. ಗ್ರಂಥಾಲಯ ಕಟ್ಟಡಕ್ಕೆ ನೀರನ್ನು ಒದಗಿಸಲು ಅಂದಾಜು ಪಟ್ಟಿಯನ್ನು ಸಿದ್ದಪಡಿಸಿ ಅನುಮೋದನೆಗೆ ಸಲ್ಲಿಸಲು ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.
2. ನಾಗಶೆಟ್ಟಿಹಳ್ಳಿ ಬಸ್ ನಿಲ್ದಾಣದಿಂದ ರಿಂಗ್ ರೋಡ್ ವರೆಗೆ ಶಾಶ್ವತ ನಿಲುಗಡೆ ಮಾಡಿರುವ ವಾಹನಗಳನ್ನು ತೆರವುಗೊಳಿಸುವಂತೆ ಸಭೆಯಲ್ಲಿ ಹಾಜರಿದ್ದ ಸಂಚಾರಿ ವಿಭಾಗದ ಸಬ್ ಇನ್ಸ್‌ಪೆಕ್ಟರ್ ರವರಿಗೆ ಶ್ರೀ ಕೇಶವ್ ಪಟೇಲ್ ರವರ ಕೋರಿಕೆಯ ಮೇರೆಗೆ ಸೂಚಿಸಲಾಯಿತು
3. ಎ.ಇ.ಸಿ.ಎಸ್ ಬಡಾವಣೆಯ 6ನೇ ಎ ಕ್ರಾಸ್‌ನಲ್ಲಿ ಶೇಖರಣೆಯಾಗಿರುವ ಕಸವನ್ನು ತೆರವುಗೊಳಿಸಲು ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಯಿತು.
4. ವೆಂಕಟಚಾರಿ ನಗರದ 5ನೇ ಮುಖ್ಯ ರಸ್ತೆ, 9ನೇ ಅಡ್ಡರಸ್ತೆಯಲ್ಲಿನ ಬೀದಿ ದೀಪಗಳನ್ನು ಸರಿಪಡಿಸುವಂತೆ ಸಭೆಯಲ್ಲಿ ಗೈರು ಹಾಜರಾಗಿದ್ದ ವಿದ್ಯುತ್ ವಿಭಾಗದ ಅಭಿಯಂತರರಿಗೆ ತಿಳಿಸುವಂತೆ ವಾರ್ಡ್ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು
5. ಜಲದರ್ಶಿನಿ ಬಡಾವಣೆಯಲ್ಲಿ ಕುಡಿಯುವ ನೀರಿನ ಸರಬರಾಜನ್ನು ಸಮರ್ಪಕವಾಗಿ ನಿರ್ವಹಿಸಲು ಸಭೆಯಲ್ಲಿ ಹಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಚಿಸಲಾಯಿತು.

6. ವೆಂಕಟಚಾರಿ ನಗರದಲ್ಲಿ ಕಳ್ಳತನ ವಾಗಿರುವ ಸಿ.ಸಿ ಕ್ಯಾಮೆರಾಗಳನ್ನು ಅನುಮೋದನೆಯ ಲಭ್ಯತೆಯ ಮೇರೆಗೆ ಅಳವಡಿಸಲು ವಾರ್ಡ್ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.
7. ಸಾಂಧಿಪನಿ ಶಾಲೆಯಿಂದ ಜಲದರ್ಶಿನಿ ಬಡಾವಣೆಯವರೆಗೆ ಹಾದುಹೋಗುವ ರಸ್ತೆಯ ಚರಂಡಿಗಳನ್ನು ದುರಸ್ಥಿಪಡಿಸಲು ಮುಂಬರುವ ಅನುದಾನದಲ್ಲಿ ಕೈಗೆತ್ತಿಕೊಳ್ಳಲು ವಾರ್ಡ್ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.
8. ವಾರ್ಡ್‌ನಲ್ಲಿ Gail ಸಂಪರ್ಕಗಳನ್ನು ಪೂರ್ಣಗೊಳಿಸುವಂತೆ Gail ಸಂಸ್ಥೆಯವರಿಗೆ ತಿಳಿಸುವಂತೆ ವಾರ್ಡ್ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.
9. ಹೆಚ್.ಐ.ಜಿ ಕಾಲೋನಿಯ 3ನೇ ಮುಖ್ಯರಸ್ತೆ, 12ನೇ ಅಡ್ಡರಸ್ತೆಯಲ್ಲಿ ಬುಲ್ಲೆವಾರ್ಡ್ ಪಾರ್ಕ್‌ಗೆ ಹೊಂದಿಕೊಂಡಿರುವ ಡ್ರೈನ್‌ಗೆ ಮುಚ್ಚಿರುವ ಎರಡು ಮುರಿದು ಬಿದ್ದ ಸ್ಲಾಬ್‌ಗಳನ್ನು ಸರಿಪಡಿಸಲು ವಾರ್ಡ್ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.

ಮೇಲ್ಕಂಡ ಸಮಸ್ಯೆಗಳು ಬಗ್ಗೆ ಸುದೀರ್ಘವಾಗಿ ಚರ್ಚಿಸಿ ನೋಡಲ್ ಅಧಿಕಾರಿ ರವರು ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ: 18, ರಾಧಾಕೃಷ್ಣ ದೇವಸ್ಥಾನ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ನಂ: 18, ರಾಧಾಕೃಷ್ಣ ದೇವಸ್ಥಾನ

**ಪ್ರತಿಯನ್ನು:**

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರ ಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಮಾನ್ಯ ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ
3. ಮಾನ್ಯ ಜಂಟಿ ಆಯುಕ್ತರು (ಆರೋಗ್ಯ/ಎಸ್‌ಡಬ್ಲ್ಯೂಎಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ
4. ಉಪ ಆಯುಕ್ತರು (ಪೂರ್ವ), ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ